# ‘ಗಣಪೆ’ ಎಂಬ ದೈತ್ಯ ಬಳ್ಳಿ!



‘ಗಣಪೆ ಬಳ್ಳಿ ಅನ್ನಬೇಕೋ? ಮರ ಅನ್ನಬೇಕೋ?’ ಎನ್ನುವುದು ತಕ್ಷಣಕ್ಕೆ ಅರ್ಥವಾಗಲಿಲ್ಲ ಈ ಬಳ್ಳಿ (ಮರ) ನೋಡಿದಾಗ..

ಏಕೆಂದರೆ ಇದಕ್ಕೆ ಮಾಮೂಲಾಗಿ ಹೇಳೋದು ಗಣಪೆ ಬಳ್ಳಿ ಎಂದು.

ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಸೋಂದಾ ಕೋಟೆ ಪ್ರದೇಶದಲ್ಲಿರುವ ಈ ಬಳ್ಳಿ ಮಾತ್ರ ಅಕ್ಕಪಕ್ಕದ ಮರಗಳಿಗೂ ಸೆಡ್ಡು ಹೊಡೆದು ದೈತ್ಯಾಕಾರವಾಗಿ ಬೆಳೆದುಕೊಂಡಿದೆ. ಇಷ್ಟೇ ಗಡುತರದ ಗಣಪೆ ಬಳ್ಳಿ ಅಲ್ಲೇ ಸಮೀಪದ ಉಳ್ಳಿಕೊಪ್ಪದಲ್ಲಿ ಶಾಲ್ಮಲಾ ಹೊಳೆಯಂಚನ್ನೆಲ್ಲ ವ್ಯಾಪಿಸಿಕೊಂಡಿದೆ. ತಳುಕು ಹಾಕಿಕೊಂಡ ಎರಡು ಬಳ್ಳಿಗಳು ಒಂದೊಂದು ದಿಕ್ಕಿನಲ್ಲಿ ಸಾಗಿವೆ. ‘ಈ ಗಣಪೆ ಬಳ್ಳಿಗಳಿಗೆ ಕನಿಷ್ಟ ಅಂದ್ರೂ 400 ವರ್ಷಗಳು ಆಗಿರಬಹುದು’ ಎನ್ನುತ್ತಾರೆ ಶಿರಸಿ ಅರಣ್ಯ ಕಾಲೇಜಿನ ಪ್ರಾಧ್ಯಾಪಕ, ಪಶ್ಚಿಮಘಟ್ಟ ಕಾರ್ಯಪಡೆ ಸದಸ್ಯ ಡಾ.ವಾಸುದೇವ.

‘ಕರ್ನಾಟಕದಲ್ಲಿ ಉಳ್ಳಿಕೊಪ್ಪ –ಸೋಂದಾದಲ್ಲಿರುವ ಗಣಪೆ ಬಳ್ಳಿಯೇ ದೊಡ್ಡದೆನಿಸಿದ್ದು, ಇದಕ್ಕಿಂತಲೂ ದೊಡ್ಡದಾದ ಬಳ್ಳಿ ಕೇರಳ ರಾಜ್ಯದ ಪವಿತ್ರ ಕಾಡೊಂದರಲ್ಲಿ (ದೇವರ ಕಾಡು) ಇದೆ’ ಎನ್ನುತ್ತಾರೆ ಅವರು.

‘ಎಂತಡಾ ಪರಸೇತಾ’ ಎಂಬ ವೈಜ್ಞಾನಿಕ ಹೆಸರುಳ್ಳ ‘ಗಣಪೆ’ ಬಳ್ಳಿ ಮರಗಳ ಬಳಸಿಕೊಂಡು ಮೇಲೇರಿ ಕೋಡಿನಾಕಾರದ ಕಾಯಿ ಬಿಡುತ್ತದೆ. ಕೋಡು ಕೂಡ ಮಾರುದ್ದವಿದ್ದು, ಅದರೊಳಗೆ ಸುಮಾರು 10ರಷ್ಟು ಬೀಜಗಳಿರುತ್ತದೆ. ಒಂದೊಂದು ಬೀಜ ಮೂರ್‍ನಾಲ್ಕು ಇಂಚು ಅಗಲವಿದ್ದು, ಕುಂಕುಮ–ಕಾಫಿ ಬಣ್ಣದೊಂದಿಗೆ ಗೊರಟೆಯಂತೆ ಕಾಣುತ್ತದೆ. ಗಣಪೆ ಬೀಜದಿಂದ ಮೊದಲೆಲ್ಲ ಹಳ್ಳಿಗಳಲ್ಲಿ ನೆಲವನ್ನು ನಯವಾಗಿಸಲು ಬಳಸುತ್ತಿದ್ದರು. ಮಣ್ಣಿನ ನೆಲದ ಮೇಲೆ ಸಿಮೆಂಟ್, ಕಾವಿ ಬಣ್ಣ ಹಾಕಿ ಗಣಪೆ ಬೀಜದಿಂದ ತಿಕ್ಕಿದಾಗ ಉತ್ತಮ